ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 77 ಇಟಿಎಸ್ 2024

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ:13.12.2024

ಇಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಆರ್ಥಿಕ ಇಲಾಖೆ,
ವಿಧಾನ ಸೌಧ, ಬೆಂಗಳೂರು.

ಇವರಿಗೆ,

ಅಬಕಾರಿ ಆಯುಕ್ತರು,
ಶಾಂತಿನಗರ, ಬೆಂಗಳೂರು.

ಸ್ವೀಕರಿಸಿದೆ.
16 DEC 2024
ಅಬಕಾರಿ ಆಯುಕ್ತರವರ ಕಛೇರಿ
ಬೆಂಗಳೂರು - 560 027

ಮಾನ್ಯರೆ,

ವಿಷಯ: ಅಬಕಾರಿ ಇಲಾಖೆಯಲ್ಲಿ ಅಬಕಾರಿ ಉಪ ನಿರೀಕ್ಷಕರು ಹಾಗೂ ಅಬಕಾರಿ ಪೇದೆ ವೃಂದದಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತು.

ಉಲ್ಲೇಖ: ಪತ್ರ ಸಂಖ್ಯೆ:ಎಕ್ಸೈಜ್/15022/79/2023, ದಿನಾಂಕ:14.03.2024 ಮತ್ತು 04.12.2024.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ತಮ್ಮ ಪತ್ರಗಳ ಕಡೆಗೆ ತಮ್ಮ ಗಮನ ಸೆಳೆಯಲಾಗಿದೆ. ಅಬಕಾರಿ ಇಲಾಖೆಯಲ್ಲಿ ಮಂಜೂರಾಗಿ ಖಾಲಿ ಇರುವ ಅಬಕಾರಿ ಉಪ ನಿರೀಕ್ಷಕ ಮತ್ತು ಅಬಕಾರಿ ಪೇದೆಗಳ ಹುದ್ದೆಗಳ ಪೈಕಿ ಕಲ್ಯಾಣ ಕರ್ನಾಟಕ ವೃಂದ ಸೇರಿದಂತೆ, 265-ಅಬಕಾರಿ ಉಪ ನಿರೀಕ್ಷಕರ ಹುದ್ದೆಗಳನ್ನು ಮತ್ತು 942-ಅಬಕಾರಿ ಪೇದೆಗಳ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಈ ಕೆಳಕಂಡಂತೆ ಭರ್ತಿ ಮಾಡಿಕೊಳ್ಳಲು ಸರ್ಕಾರದ ಸಹಮತಿ ನೀಡಲಾಗಿದೆ.

| | ವೃಂದ | 2024-25 | 2025-26 | ಒಟ್ಟು |
|---|---|---|---|---|
| 1 | ಅಬಕಾರಿ ಉಪ ನಿರೀಕ್ಷಕರು | 133 | 132 | 265 |
| 2 | ಅಬಕಾರಿ ಪೇದೆಗಳು | 471 | 471 | 942 |
| ಒಟ್ಟು | | 604 | 603 | 1207 |

ಮುಂದುವರೆದು, ಅಬಕಾರಿ ಪೇದೆ ಹುದ್ದೆ ನೇರ ನೇಮಕಾತಿ ಮೂಲಕ ಭರ್ತಿಯಾದ ನಂತರ ಸದರಿ ಹುದ್ದೆ ಎದುರಾಗಿ ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಅನುಮತಿ ನೀಡಿರುವ 1000 ಗೃಹ ರಕ್ಷಕ ಸಿಬ್ಬಂದಿಗಳ ಸೇವೆಯನ್ನು ರದ್ದುಗೊಳಿಸುವಂತೆ ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

13/12/2024

(ಭೀಮಪ್ಪ ಜ. ಅಜೂರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಅಬಕಾರಿ).